ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ
ಕರ್ನಾಟಕ ಶಾಲಾ ಗುಣಮಟ್ಟ ಮೌಲ್ಯಾಂಕನ ಮತ್ತು ಅಂಗೀಕರಣ ಪರಿಷತ್ತು
Karnataka School Quality Assessment & Accreditation Council
ಕೆ.ಎಸ್.ಇ.ಎ.ಬಿ, 6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು-03. ದೂರವಾಣಿ ಸಂಖ್ಯೆ: 23341615, 23562283, 29720300
e-mail: ksqaacbangalore@gmail.com & ksqaacbengaluru@gmail.com

ಸಂಖ್ಯೆ: ಕೆ.ಎಸ್.ಕ್ಯು1/5 ಮತ್ತು 8ನೇ ವಾ.ಪ/05/2022-23 ದಿನಾಂಕ: 31.01.2023

# ಜ್ಞಾಪನ

**ವಿಷಯ:** 2022-23ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮದ ಎಲ್ಲಾ ಶಾಲೆಗಳಲ್ಲಿನ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಮೌಲ್ಯಾಂಕನಕ್ಕೆ ಸಂಬಂಧಿಸಿದಂತೆ ಪರೀಕ್ಷಾ ಕೇಂದ್ರಗಳ ರಚನೆ ಬಗ್ಗೆ.

**ಉಲ್ಲೇಖ:**
1. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಕಛೇರಿ ಸುತ್ತೋಲೆ ಸಂಖ್ಯೆ: E-870867-DPII-PIOC7-2(PLM)/3/2022, ದಿನಾಂಕ: 12.12.2022
2. ಈ ಕಛೇರಿ ಪತ್ರ ಸಮಸಂಖ್ಯೆ ದಿನಾಂಕ: 21.01.2023 ಮತ್ತು 30.01.2023
3. ದಿನಾಂಕ: 31.01.2023 ರಂದು ಮಾನ್ಯ ಆಯುಕ್ತರು, ಶಾ.ಶಿ.ಸಾ.ಇ, ಬೆಂಗಳೂರು ರವರೊಂದಿಗೆ ನಡೆದ ಸಭೆಯಲ್ಲಿ ಸೂಚಿಸಿದಂತೆ

~*~*~*~

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖ (1) ರನ್ವಯ 2022-23 ನೇ ಸಾಲಿನಲ್ಲಿ ರಾಜ್ಯ ಪಠ್ಯಕ್ರಮ ಅನುಸರಿಸುತ್ತಿರುವ ಎಲ್ಲಾ ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳ 5 ಮತ್ತು 8ನೇ ತರಗತಿ ವಿದ್ಯಾರ್ಥಿಗಳಿಗೆ ಮೌಲ್ಯಾಂಕನವನ್ನು ನಡೆಸಲಾಗುತ್ತಿದೆ. 5 ಮತ್ತು 8ನೇ ತರಗತಿಯ ವಾರ್ಷಿಕ ಪರೀಕ್ಷೆಗೆ ಪರೀಕ್ಷಾ ಕೇಂದ್ರಗಳನ್ನು ರಚಿಸಲು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ ವತಿಯಿಂದ Software ಸಿದ್ಧಪಡಿಸಲಾಗಿದ್ದು, ಬಿ.ಇ.ಓ Login ನಲ್ಲಿ ಶಾಲಾವಾರು ವಿದ್ಯಾರ್ಥಿಗಳ ಸಂಖ್ಯೆಯನ್ನಾಧರಿಸಿ ದಿನಾಂಕ: 02.02.2023 ರೊಳಗೆ ಪರೀಕ್ಷಾ ಕೇಂದ್ರಗಳ ರಚನಾ ಕಾರ್ಯವನ್ನು ಕಡ್ಡಾಯವಾಗಿ ಮಂಡಲಿಯ https://kseab.karnataka.gov.in ವೆಬ್‌ಸೈಟ್‌ನ ಬಿ.ಇ.ಓ ಲಾಗ್-ಇನ್ ನಲ್ಲಿ ಪೂರ್ಣಗೊಳಿಸುವಂತೆ ಉಲ್ಲೇಖ (2) ರ ಈ ಕಛೇರಿ ಪತ್ರಗಳಲ್ಲಿ ಈಗಾಗಲೇ ತಿಳಿಸಲಾಗಿತ್ತು.

**ಮಾನ್ಯ ಆಯುಕ್ತರು, ಶಾ.ಶಿ.ಸಾ.ಇ, ಬೆಂಗಳೂರು ರವರು ದಿನಾಂಕ: 31.01.2023 ರಂದು ನಡೆದ ಸಭೆಯಲ್ಲಿ ಸೂಚಿಸಿರುವಂತೆ ಮಲೆನಾಡು, ಕರಾವಳಿ, ಗುಡ್ಡಗಾಡು ಪ್ರದೇಶದ ಶಾಲೆಗಳಲ್ಲಿ ಮತ್ತು ಪರೀಕ್ಷಾ ಕೇಂದ್ರಗಳು ವಿದ್ಯಾರ್ಥಿಗಳ ಪ್ರಯಾಣಕ್ಕೆ ದೂರವಾಗಿದ್ದಲ್ಲಿ ವಿದ್ಯಾರ್ಥಿಗಳಿಗೆ ಅನುಕೂಲವಾಗುವಂತೆ ಪರೀಕ್ಷಾ ಕೇಂದ್ರಗಳನ್ನು ರಚಿಸುವುದು, ಅವಶ್ಯಕತೆಯಿದ್ದಲ್ಲಿ ಆಯಾ ಶಾಲೆಗಳನ್ನೇ ಪರೀಕ್ಷಾ ಕೇಂದ್ರಗಳಾಗಿ ಉಳಿಸಿಕೊಳ್ಳುವುದು ಹಾಗೂ ಅವಕಾಶವಿದ್ದಲ್ಲಿ ಕಡಿಮೆ ದಾಖಲಾತಿ ಇರುವ ಶಾಲೆಯ ವಿದ್ಯಾರ್ಥಿಗಳನ್ನು ಸಮೀಪದ ಶಾಲೆಗಳಿಗೆ ಟ್ಯಾಗ್ ಮಾಡುವುದು.**

ಪ್ರಸ್ತುತ ಹೊಸ ಪರೀಕ್ಷಾ ಕೇಂದ್ರಗಳನ್ನು ರಚಿಸಲು, ಈಗಾಗಲೇ ಮ್ಯಾಪ್ ಮಾಡಿರುವ ಶಾಲೆಗಳ ಕೇಂದ್ರಗಳನ್ನು ಬದಲಿಸಲು ಹಾಗೂ ಈಗಾಗಲೇ ರಚಿತವಾಗಿರುವ ಕೇಂದ್ರವನ್ನು Delete ಮಾಡಲು ಕೆಳಕಂಡಂತೆ ಕ್ರಮ ವಹಿಸಬಹುದಾಗಿದೆ.

1. ಶಾಲೆಯೊಂದನ್ನು ಹೊಸದಾಗಿ ಕೇಂದ್ರವನ್ನಾಗಿ ಮಾಡಲು ಬಯಸಿದಲ್ಲಿ ಆ ಶಾಲೆಯು ಈಗಾಗಲೇ ಮತ್ತೊಂದು ಕೇಂದ್ರಕ್ಕೆ ಮ್ಯಾಪ್ ಆಗಿರುವುದನ್ನು ಬದಲಿಸಿ 'Remove Assigned Centre' ಆಯ್ಕೆ ಮಾಡಿಕೊಂಡು ಮುಂದುವರಿಯಬೇಕು.
2. ಶಾಲೆಯೊಂದನ್ನು ಈಗಾಗಲೇ ಮ್ಯಾಪ್ ಮಾಡಿರುವ ಕೇಂದ್ರದ ಬದಲು ಬೇರೇ ಕೇಂದ್ರಕ್ಕೆ ಮ್ಯಾಪ್ ಮಾಡಲು ಬಯಸಿದಲ್ಲಿ ಆ ಶಾಲೆಯು ಈಗಾಗಲೇ ಗುರುತಿಸಿರುವ ಕೇಂದ್ರಕ್ಕೆ ಮ್ಯಾಪ್ ಆಗಿರುವುದನ್ನು ಬದಲಿಸಿ ತಮ್ಮ ಆಯ್ಕೆಯ ನೂತನ ಅಥವಾ ಬೇರೇ ಕೇಂದ್ರಕ್ಕೆ ಮ್ಯಾಪ್ ಮಾಡಬಹುದು.
3. ಯಾವುದೇ ಕೇಂದ್ರವನ್ನು ಡಿಲೀಟ್ ಮಾಡಲು ಬಯಸಿದಲ್ಲಿ ಯಾವುದೇ ಇತರೆ ಶಾಲೆಯು ಆ ಕೇಂದ್ರಕ್ಕೆ ಮ್ಯಾಪ್ ಆಗದಿರುವುದನ್ನು ಖಚಿತಪಡಿಸಿಕೊಳ್ಳಬೇಕು.

ಜಿಲ್ಲಾ ಉಪನಿರ್ದೇಶಕರು (ಆಡಳಿತ), ಉಪನಿರ್ದೇಶಕರು (ಅಭಿವೃದ್ಧಿ) ಹಾಗೂ ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳು ಈ ಬಗ್ಗೆ ಸೂಕ್ತ ಕ್ರಮವಹಿಸಿ ದಿನಾಂಕ: 08.02.2023 ರೊಳಗೆ ಕಡ್ಡಾಯವಾಗಿ ಪರೀಕ್ಷಾ ಕೇಂದ್ರಗಳ ರಚನಾ ಕಾರ್ಯವನ್ನು ಪೂರ್ಣಗೊಳಿಸಲು ತಿಳಿಸಿದೆ. ಯಾವುದೇ ಕಾರಣಕ್ಕೂ ಮತ್ತೊಮ್ಮೆ ದಿನಾಂಕವನ್ನು ವಿಸ್ತರಿಸಲಾಗುವುದಿಲ್ಲ. ತಂತ್ರಾಂಶಕ್ಕೆ ಸಂಬಂಧಿಸಿದಂತೆ ಯಾವುದೇ ಸಮಸ್ಯೆ/ಗೊಂದಲಗಳಿದ್ದಲ್ಲಿ ಮಾಹಿತಿಗಾಗಿ ಮಂಡಲಿಯ **ಸಹಾಯವಾಣಿ ಸಂಖ್ಯೆ 080–29720438 ಮತ್ತು 080–23341615** ಕ್ಕೆ ಕಛೇರಿ ಅವಧಿಯಲ್ಲಿ ಸಂಪರ್ಕಿಸಲು ತಿಳಿಸಿದೆ.

ಮಾನ್ಯ ಅಧ್ಯಕ್ಷರು, ಕೆ.ಎಸ್.ಇ.ಎ.ಬಿ ರವರಿಂದ ಅನುಮೋದನೆ ಪಡೆಯಲಾಗಿದೆ.

01/02/2023

ಕಾರ್ಯನಿರ್ವಾಹಕ ನಿರ್ದೇಶಕರು
ಕೆ.ಎಸ್.ಕ್ಯು.ಎ.ಎ.ಸಿ.

**ರವರಿಗೆ,**

1. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಆಡಳಿತ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಜಿಲ್ಲಾ ಉಪನಿರ್ದೇಶಕರು (ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
3. ರಾಜ್ಯದ ಎಲ್ಲಾ ತಾಲ್ಲೂಕುಗಳ ಕ್ಷೇತ್ರಶಿಕ್ಷಣಾಧಿಕಾರಿಗಳಿಗೆ ಅಗತ್ಯ ಕ್ರಮಕ್ಕಾಗಿ.

**ಪ್ರತಿಯನ್ನು ಗೌರವಪೂರ್ವಕವಾಗಿ ಮಾಹಿತಿಗಾಗಿ,**

1. ಮಾನ್ಯ ಆಯುಕ್ತರು, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು ರವರಿಗೆ,
2. ಮಾನ್ಯ ಅಧ್ಯಕ್ಷರು, ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ, ಬೆಂಗಳೂರು ರವರಿಗೆ,
3. ನಿರ್ದೇಶಕರು (ಪ್ರಾಥಮಿಕ ಶಿಕ್ಷಣ), ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ, ಬೆಂಗಳೂರು ರವರಿಗೆ,
4. ಕಛೇರಿ ಪ್ರತಿ.